**ಕರ್ನಾಟಕ ಸರ್ಕಾರ**
**5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ದೇವನಹಳ್ಳಿ**
**ಎಸ್.ಸಿ. ನಂ. 15007/2023**

| | | |
|---|---|---|
| ಹೆಸರು | : | ಆಶೋಕ |
| ತಂದೆ ಹೆಸರು | : | ರಾಮಪ್ಪ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಬಿ.ಕೆ.ಹಳ್ಳಿ |

**PW-17, CW-17**

(ಇಂದು ದಿನಾಂಕ 07.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು)

**ಮುಖ್ಯ ವಿಚಾರಣೆ : ಅಭಿಯೋಜನೆ ಪರ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದ:**

ನಾನು ಆರೋಪಿತರನ್ನು ನೋಡಿರುವುದಿಲ್ಲ. 2022 ರಲ್ಲಿ ಅಮೆಜಾನ್ ಕಂಪನಿಯ ಮುಂಭಾಗದಲ್ಲಿ ಪೆಟ್ಟಿಗೆ ಅಂಗಡಿ ಇಟ್ಟುಕೊಂಡಿದ್ದೆ. ಅಂಗಡಿಯಲ್ಲಿ ಟೀ, ಕಾಫಿ, ಬೀಡಿ, ಸಿಗರೇಟ್ ಮಾರಾಟ ಮಾಡುತ್ತಿದ್ದೆ. ನನ್ನ ಸಮಕ್ಷಮ ಯಾವುದೇ ಘಟನೆ ಆಗಿರುವುದಿಲ್ಲ. ಅಮೆಜಾನ್ ಕಂಪನಿಯ ಮುಂಭಾಗದಲ್ಲಿ ಸಿಸಿ ಟಿವಿ ಅಳವಡಿಸಿರುತ್ತಾರೆ. ನಮ್ಮ ಅಂಗಡಿ ಅಮೆಜಾನ್ ಕಂಪನಿಯ ಗೇಟ್ ಬಿಟ್ಟು 20 ಅಡಿ ಅಂತರದಲ್ಲಿ ಇತ್ತು.

(ಈ ಸಮಯದಲ್ಲಿ ಮಾನ್ಯ ಪಿಪಿಯವರು ಸಿಸಿ ಟಿವಿ ಫೋಟೇಜ್ ಬೇಕಾಗಿರುವುದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲು ಕೇಳಿಕೊಂಡಿದ್ದರಿಂದ ಮುಂದೂಡಲಾಯಿತು.)

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಿಸಿ, ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇ.

V AD& SJ, B,luru (R)
Devanahalli

(ಈ ಸಂದರ್ಭದಲ್ಲಿ ಮಾನ್ಯ ಪಿ.ಪಿ.ಯವರ ವಿನಂತಿ ಮೇರೆಗೆ ಕಡತವನ್ನು ಹಾಗೂ ಸಾಕ್ಷ್ಯವನ್ನು ಪರಿಗಣಿಸಿ, ಈ ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲವೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲು : ಮಾನ್ಯ ಪಿ.ಪಿ. ಯವರಿಂದ :**

ದಿನಾಂಕ 31.01.2022 ರಂದು ನಾನು ಸಂಜೆ ನೈಟ್ ಶಿಫ್ಟ್ ಗೆ ಕೆಲಸಕ್ಕೆ ಹೋಗಲು ಎಂದು ಕಂಪನಿಯ ಬಳಿ ಬಂದಾಗ ನನ್ನೊಂದಿಗೆ ಸಂಜಯ್ ಎನ್ನುವವನು ಬಂದ ನಾವು ಕಂಪನಿಯ ಮುಂಭಾಗದಲ್ಲಿರುವ ಟೀ ಅಂಗಡಿಯ ಪಕ್ಕದಲ್ಲಿ ಸಂಜೆ 6.45 ಗಂಟೆಯಲ್ಲಿ ಕುಳಿತಿರುವಾಗ 2 ಮತ್ತು 3 ನೇ ಆರೋಪಿತರು ಉಳಿದ ಆರೋಪಿತರೊಂದಿಗೆ ಸೇರಿಸಿಕೊಂಡು ಚಾಸಾ.2 ರವರಿಗೆ ಹೇಗಾದರೂ ಮಾಡಿ ಹೊಡೆಯಬೇಕು, ಆತನು ರಾಕೇಶ್‌ನ ಲವರ್ ಆದ ಪ್ರೀತಿ ಎಂಬುವವಳಿಗೆ ವಿನಹ ಕಾರಣ ಸಂದೇಶಗಳನ್ನು ಕಳುಹಿಸಿದ್ದಾನೆ ಆತನನ್ನು ಈ ದಿನ ಮುಗಿಸಬೇಕು ಎಂದು ಒಬ್ಬರಿಗೊಬ್ಬರು ಮಾತನಾಡಿಕೊಳ್ಳುತ್ತಿದ್ದರು, ನಾನು ಮತ್ತು ಸಂಜಯ್ ಅವರ ಮಾತನಾಡುವುದನ್ನು ಕೇಳಿಸಿಕೊಳ್ಳುತ್ತಾ ಅವರು ಏನು ಮಾಡುತ್ತಾರೆ ಎಂದು ನೋಡುತ್ತಿದ್ದೆವು ಅನ್ನುವುದು ಸರಿಯಲ್ಲ. ಆ ಸಮಯದಲ್ಲಿ ಆರೋಪಿ ವರುಣ್ ನಮ್ಮ ಕಡೆ ನೋಡಿ ನಾವುಗಳು ಕೇಳಿಸಿಕೊಳ್ಳುತ್ತಿದ್ದೆವು ಎಂದು ತಿಳಿದು ನಮ್ಮ ಬಳಿ ಬಂದು ನಮ್ಮನ್ನು ಕಂಪನಿಯ ಒಳಗಡೆ ಕರೆದುಕೊಂಡು ಹೋದರು ಅನ್ನುವುದು ಸರಿಯಲ್ಲ. ಕಂಪನಿಯ ಒಳಗಡೆ ಸುರೇಂದ್ರನು ಕೆಲಸ ಮಾಡುತ್ತಿದ್ದು, ಆತನು ಪ್ರೀತಿ ಎಂಬ ಹುಡುಗಿಗೆ ಮಸೇಜ್ ಮಾಡಿದ ವಿಷಯಕ್ಕೆ ಆತನನ್ನು ಕೆಲಸದಿಂದ ಟರ್ಮಿನೇಟ್ ಮಾಡಿದ್ದರು, ಈ ವಿಷಯವಾಗಿ ಆರೋಪಿ ವರುಣ್ ಯಾರಿಗೋ ಫೋನ್ ನಲ್ಲಿ ಸುರೇಂದ್ರ ಆಚೆ ಬರುತ್ತಿದ್ದಾನೆ ಆತನನ್ನು ಈ ದಿನವೇ ಮುಗಿಸಿ ಎಂದು ಹೇಳುತ್ತಿದ್ದನ್ನು ಅನ್ನುವುದು ಸರಿಯಲ್ಲ. ನಂತರ ಸುಮಾರು ರಾತ್ರಿ 8.00 ಗಂಟೆಗೆ ಚಾಸಾ.2 ರವರಿಗೆ ಕಂಪನಿಯ ಹೊರಗಡೆ ಯಾರೋ ಚಾಕುವಿನಿಂದ ಚುಚ್ಚಿದ್ದಾರೆ ಎಂದು ಕಂಪನಿಯವರಿಗೆ ತಿಳಿಯಿತು ಹಾಗೂ ನನಗೂ ರಾಕೇಶ್ ಮತ್ತು ಆತನ ಸ್ನೇಹಿತರು ಸೇರಿಕೊಂಡು ಸುರೇಂದ್ರನಿಗೆ ಚಾಕು ಹಾಕಿದವರಾಗಿರುತ್ತಾರೆ ಎಂದು ಮಾಹಿತಿ ತಿಳಿಯಿತು ಅನ್ನುವುದು ಸರಿಯಲ್ಲ. ಸುರೇಂದ್ರನಿಗೆಹೊಡೆದು ಕೊಲೆ ಮಾಡಲು ಹೊಂಚು ಹಾಕುತ್ತಿದ್ದ ರಾಕೇಶ್, ವರುಣ್ ಮತ್ತು ಅವನ ಸ್ನೇಹಿತರನ್ನು ನೋಡಿದ್ದು ಮತ್ತೆ ನೋಡಿದರೆ

ಗುರುತಿಸುತ್ತೇನೆ ಎಂದು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಾನು ದಿನಾಂಕ 02.02.2022 ರಂದು ಪೊಲೀಸರು ಮುಂದೆ ದಿನಾಂಕ 31.01.2022 ರಂದು –----------------- ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಅನ್ನುವುದು ಸರಿಯಲ್ಲ. ಹೇಳಿಕೆಯ ಭಾಗವನ್ನು ನಿ.ಪಿ.23 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

**ಪಾಟೀ ಸವಾಲು : 1 ರಿಂದ 7 ನೇ ಆರೋಪಿ ಪರ ವಕೀಲರಿಂದ:** ಪಾಟೀ ಸವಾಲು ಇಲ್ಲ

ಓ.ಹೇ.ಕೇ.ಸ.ಇ.

V AD& SJ, B,luru (R)
Devanahalli